ನಿನ್ನನ್ನು ಸಾಕ್ತಾ ಇದ್ದೇವೆ. ನೀನೇ ನಮಿಗೆ ದಿಕ್ಕು' ಅಂತ ದಿಣ್ಣ ಕೂಗಿದ್ದಿದ್ಲು. ಅವ ನಮ್ಮಿಬ್ಬರ ಕಾಲಿಗೆ ಬಿದ್ದು 'ಮಾಫಿ ಮಾಡಿ. ಇನ್ನು ಮುಂದೆ ಹಾಗೆ ಮಾಡೂದಿಲ್ಲ' ಅಂತ ಹೇಳಿದ್ದ. ಆದ್ರೆ....

'ಏನು ಆದ್ರೆ? ಯೆಂತದಾಯ್ತು?' ಸಾಧು ಕೇಳಿದ.

ಅವತ್ತು ರಾತ್ರಿ ನಾವೆಲ್ಲ ಊಟ ಮಾಡಿ ಮಲಗಿದ್ದಷ್ಟೆ. ಬೆಳಿಗ್ಗೆದ್ದು ನೋಡಿದಾಗ ಅವ ಇಲ್ಲ. ತಿರುಪತಿ ದೇವರಿಗೆ ಮುಡಿಪು ಕಟ್ಟಿಟ್ಟ ದುಡ್ಡು, ಸುಮಂಗಲನ ಒಂದು ಜೊತೆ ಚಿನ್ನದ ಬಳೆ ಎಲ್ಲ ಕದ್ದು ಓಡಿಹೋಗಿದ್ದ.

'ಎಲ್ಲಿಗೆ?'

ಬೊಂಬಾಯಿಗೆ. ಅದು ನಮಿಗೆ ಗೊತ್ತಾದದ್ದು ಎಷ್ಟೋ ಸಮಯದ ನಂತರ. ಅವ ಆ ಚಿನ್ನ ಹಣ ಎಲ್ಲ ಹಿಡ್ಕೊಂಡು ಬೊಂಬಾಯಿಯಲ್ಲಿ ಒಂದು ಹೋಟ್ಳಿಗೆ ಹೋಗಿ ಸೇರಿದ್ದ ಅಂತೆ. ನಮ್ಮ ಊರಿನವರು ಒಬ್ಬರು ನೋಡಿದವರು ನಂಗೆ ತಿಳಿಸಿದರು. ಕೆಲವು ಸಮಯದ ನಂತ್ರ ಅವರ ಹತ್ರವೇ ಒಂದಿಷ್ಟು ಹಣ, ಸುಮಂಗಲಾಳ ಒಂದು ಜೊತೆ ಬಳೆ ಎಲ್ಲ ವಾಪಾಸ್ ಕಳಿಸಿದ್ದ. 'ನಾನು ಒಂದು ಹೋಟ್ಲು ಸೇರಿ ದುಡೀತಾ ಇದ್ದೇನೆ, ನನ್ನ ಬಗ್ಗೆ ಎಂತಸಾ ಚಿಂತೆ ಬೇಡ' ಅಂತಲೂ ಕಾಗದ ಕೊಟ್ಟು ಕಳಿಸಿದ್ದ. ಆ ದಿವಸ ಸುಮಂಗಲಾ ದೇವರಿಗೆ ತುಪ್ಪದ ದೀಪ ಹಚ್ಚಿ ಬಿಕ್ಕಿ ಬಿಕ್ಕಿ ಕೂಗಿದ್ದಿದ್ಲು. ಆ ದೃಶ್ಯ ಮೊನ್ನೆಮೊನ್ನೆ ನನ್ನ ಕಣ್ಣ ಮುಂದೆ ನಡ್ದ ಹಾಗುಂಟು. ನಂತ್ರ ಆಗಾಗ ಕಾಗದ ಹಾಕುದು, ಸ್ವಲ್ಪ ಸ್ವಲ್ಪ ದುಡ್ಡು ಕಳಿಸುದು ಎಲ್ಲ ಮಾಡ್ತಿದ್ದ. ಕೆಲವು ವರ್ಷಗಳ ನಂತರ ಆಗಾಗ ಊರಿಗೂ ಬಂದು ಹೋಗ್ಲಿಕ್ಕೆ ಸುರು ಮಾಡಿದ. ಕೆಲವು ವರ್ಷ ಹೋದ ನಂತ್ರ ಬೊಂಬಾಯಿಯಲ್ಲಿ ಅವನೇ ಒಂದು ಸ್ವಂತಕ್ಕೆ ಹೋಟ್ಲು ಇಟ್ಟ. ಮದುವೆ ಎಲ್ಲ ಅವನೇ ಮಾಡಿಕೊಂಡದ್ದು. ಊರಿನ ಹುಡುಗಿಯೇ. ಅಲ್ಲಿಯೇ ಹುಟ್ಟಿ ಬೆಳೆದವಳು. ನಮಿಗೆ ಸ್ವಲ್ಪ ಬೇಸರ ಇತ್ತು. ಆದ್ರೆ ಹುಡುಗಿ ಒಳ್ಳೆಯವಳು ಅಂತ ಸಮಾಧಾನ ಆಯ್ತು. ಅವ ಕಂಡಾಬಟ್ಟೆ ಡೆವಲಪ್ ಆದ. ಸ್ವಂತ ಮನೆ, ಕಾರು ಎಲ್ಲ ಮಾಡಿಕೊಂಡ. ಊರಿನ ದೇವಸ್ಥಾನದ, ಭೂತ ಸ್ಥಾನದ ಅಭಿವೃದ್ಧಿಗೆ ಭಾರೀ ಖರ್ಚು ಮಾಡಿದ. ವರ್ಷ ವರ್ಷ ಏಪ್ರಿಲ್ ಮೇ ತಿಂಗಳಲ್ಲಿ ಹೆಂಡತಿ ಮಕ್ಕಳ ಸಮೇತ ಊರಿಗೆ ಬರ್ತಿದ್ದ. ಬೇರೆ ಬೇರೆ ದೇವಸ್ಥಾನಗಳಿಗೆ ಹೋಗೋದೇನು, ದಾನ ಧರ್ಮ ಮಾಡೂದೇನು ಎಲ್ಲ ಜೋರಿತ್ತು. ನಂಗೇನೂ ದೇವಸ್ಥಾನಗಳಿಗೆ ಹೋಗೂದು ಅಂಥ ಉಮೇದಿ ಇಲ್ಲ. ಆದ್ರೆ ಇವಳಿಗೆ ಸ್ವಲ್ಪ ಆಸೆಯಿತ್ತು. ಅವಳನ್ನು ಕಟೀಲು, ಕೊಲ್ಲೂರು, ಧರ್ಮಸ್ಥಳ ಅಂತೆಲ್ಲ ಸುತ್ತಿಸಿದ್ದ. ಅವಳಿಗೆ ಆದ ಖುಷಿ ಅಷ್ಟಿಷ್ಟಲ್ಲ. ಅವನ ಮಕ್ಕಳಿಗೂ ಇವಳು ಅಂದ್ರೆ ಜೀವ. ಆದ್ರೆ ನನ್ನ ಹಣೆ ಬರಹ ಏನು ಸಾ ಚೆನ್ನಾಗಿರ್ಲಿಲ್ಲ.

'ಯಾಕೆ ಏನಾಯ್ತು?'

ಈಗ ಎರಡು ವರ್ಷಗಳ ಹಿಂದೆ ಇವಳಿಗೆ ಕ್ಯಾನ್ಸರ್ ಅಂತ ಗೊತ್ತಾಯ್ತು.

'ಅಯ್ಯೋ'

'ಹಾಂ ಸಾಧುಗಳೇ. ಹೆಳೆಗೆ ಎರಡು ದಿನ ಜ್ವರ ಬಂದದ್ದು. ಕಡೆಗೆ ಆ ಪರೀಕ್ಷೆ ಈ ಪರೀಕ್ಷೆ ಅಂತೆಲ್ಲ ಮಾಡಿದಾಗ ಗರ್ಭಕೋಶದ ಕ್ಯಾನ್ಸರ್ ಅಂತ ಗೊತ್ತಾಯಿತು. ಅದೂ ಸಾ ಮೂರನೆಯ ಹಂತದಲ್ಲಿ ಉಂಟು ಅಂತ ಗೊತ್ತಾಯಿತು. ಡಾಕ್ಟ್ರಿಗೆ ಕೇಳಿದಾಗ ಲಕ್ಷಗಟ್ಟಲೆ ಖರ್ಚು ಮಾಡಿದ್ರೆ ಒಂದಷ್ಟು ತಿಂಗಳು ಬದುಕಬಹುದು ಅಂತ ಹೇಳಿದ್ರು. ನಂಗೆ ಭೂಮಿ ಕುಸಿದ ಹಾಗಾಯ್ತು. ದಯಾಕರನ ಹತ್ರ ಹೇಳಿದೆ. ಅವ ನಂಗೆ ಈಗ ನೋಟ್ ಬ್ಯಾನ್, ಜಿಎಸ್‌ಟಿ ಎಲ್ಲ ತೊಂದರೆ ಆಗಿದೆ. ಕಂಡಾಬಟ್ಟೆ ಲಾಸ್ ಅಂತ ಹೇಳಿದ. ಎಂತ ಮಾಡ್ಲಿಕ್ಕೆ ಆಗ್ತದೆ? ನಾನು ಅವುಡುಗಚ್ಚಿ ಅಲ್ಲಿ ಇಲ್ಲಿ ಸಾಲಮಾಡಿ ಸಣ್ಣ ಮಟ್ಟಿನ ಮದ್ದು ಮಾಡಿ ಅವಳ ಸಾವನ್ನು ಮುಂದಕ್ಕೆ ಹಾಕ್ತಾ ಬಂದೆ. ಆದ್ರೆ ಅವಳು ಹೆಚ್ಚು ಸಮಯ ನರಳಲಿಲ್ಲ. ಮೊನ್ನೆ ಫೆಬ್ರವರಿಯಲ್ಲಿ ದೇವರ ಪಾದ ಸೇರಿದ್ಲು'.

ದಯಾನಂದ ತಲೆ ಅಡಿಗೆ ಹಾಕಿ ಒಮ್ಮೆ ಮಾತು ನಿಲ್ಲಿಸಿದ. ಮತ್ತೆ ಒಂದೆರಡು ನಿಮಿಷ ಬಿಟ್ಟು ಮುಂದುವರಿಸಿದ.

ಇವಳ ಹನ್ನೆರಡಕ್ಕೆ ತಮ್ಮ ಬಂದಿದ್ದ, ಹೆಂಡತಿ ಮಕ್ಕಳನ್ನು ಕರ್ಕೊಂಡು. ಅವತ್ತು ರಾತ್ರಿ, ಅಣ್ಣಾ... ಇನ್ನು ನೀನು ಒಬ್ಬನೇ ಇಲ್ಲಿ ಇರೂದು ಬೇಡ. ಇಲ್ಲಿದ್ದು ಆಸ್ತಿಯೆಲ್ಲ ಮಾರಿ ನಮ್ಮೊಟ್ಟಿಗೆ ಬಾ. ನಂಗೆ ಸಾ ಅಲ್ಲಿ ವ್ಯವಹಾರ ಎಲ್ಲ ಲಾಸಿನಲ್ಲಿ ನಡೀತಾ ಉಂಟು. ನೋಡಿಕೊಳ್ಳಿಕ್ಕೆ ಒಂದು ಜನ ಅಂತ ಆಗ್ತದೆ ಅಂದ. ನಂಗೆ ಎದೆ ದಸಕ್ಕಂತ ಆಯಿತು. ಅರುವತ್ತು ಎಪ್ಪತ್ತು ವರ್ಷ ಬಾಳಿ ಬದುಕಿದ ಮನೆ. ಮೈ ಬಗ್ಗಿಸಿ ರಟ್ಟೆ ಮುರ್ದು ಬೆಳೆಸಿದ ತೋಟ, ಗದ್ದೆ ಎಲ್ಲ ಬಿಟ್ಟು ಅಲ್ಲಿಗೆ ಹೋಗುದಾ? ಸಾಧ್ಯವೇ ಇಲ್ಲ ಅಂತ ಹೇಳಿದೆ. ಅವ ಒಂದು ನಮೂನಿ ಹಟ ಮಾಡಿದ. ನಾನು ಒಪ್ಲೇ ಇಲ್ಲ. ಆಗ ಅವನ ಹೆಂಡತಿ, 'ಅಯ್ಯಾ... ನೀವು ಯಾಕೆ ಅವರನ್ನು ಅಷ್ಟು ಹಟ ಮಾಡಿ ಬರ್ಲಿಕ್ಕೆ ಹೇಳುದು? ಇಲ್ಲಿ ಇದ್ದು ಮನೆ, ಗದ್ದೆ ತೋಟ ಎಲ್ಲ ನೋಡಿಕೊಳ್ಳಿ. ಹೇಗೂ ಅವ್ರಿಗೆ ಈಗ ಹಿಂದಿಲ್ಲ ಮುಂದಿಲ್ಲ. ನಾಳೆ ದಿವಸ ಅದೆಲ್ಲ ನಮಿಗೇ ಸೇರುದಲ್ವಾ' ಅಂತ ರಾಗ ಎಳೆದಳು. ಅದು ಕೇಳಿ ನಂಗೆ ಮತ್ತೆ ಸಾ ಕೈಕಾಲು ನಡುಗಿತು. 'ನೀನು ಹೇಳುದು ಸರಿಯೇ. ಅವ ಇಷ್ಟು ವರ್ಷ ಊರಲ್ಲಿ ಇದ್ದವ. ಹಾಗೆಲ್ಲ ಇದ್ದಕ್ಕಿದ್ದ ಹಾಗೆ ಬಿಟ್ಟು ಬರೂದು ಅಂದ್ರೆ ಕಷ್ಟವೇ. ಅವ ಇಲ್ಲಿಯೇ ಇದ್ದು ಮನೆ, ಆಸ್ತಿ ಎಲ್ಲ ನೋಡಿಕೊಂಡು ಇರ್ಲಿ. ಎಂಥದಿದ್ರು ಎಲ್ಲ ಸಾ ನಮಿಗೇ ಸೇರುದಲ್ವಾ?' ಅಂತ ಹುಳಿ ನಗೆ ಆಡಿಕೊಂಡು ಹೇಳಿದ. ಅವ್ರದಿಬ್ರದ್ದೂ ಮಾತು ಕೇಳಿ ನಂಗೆ ಮೈ ಮೇಲೆ ಕೇರೆ ಹಾವು ಹರಿದಾಡಿದ ಹಾಗಾಯ್ತು. ಯೆಂತ ಮಾಡುದು? ಎಷ್ಟಾದ್ರು ತಮ್ಮ ಅಲ್ವಾ? ನಾನು ದಿಕ್ಕುದೆಸೆ ಇಲ್ಲದವನ ಹಾಗೆ ಆದೆ. ಅವ, ಅವನ ಹೆಂಡತಿ ಹೇಳಿದ್ದಕ್ಕೆ ಕೋಲೆ ಬಸವನ ಹಾಗೆ ತಲೆ ಆಡಿಸಿದೆ. ಇಪ್ಪತ್ತೊಂದನೇ ದಿನದ್ದು ಕಾರ್ಯ ಮುಗಿಸಿ ಅವರೆಲ್ಲ ಬೊಂಬಾಯಿಗೆ ಹೋದ್ರು. ಅದಾಗಿ ಒಂದು ಒಂದೂವರೆ ತಿಂಗಳಿಗೆ ಸುರುವಾಯಿತು ನೋಡಿ ಈ ಕೊರೊನಾದ ಕಾಟ. ಎಲ್ಲ ಕಡೆ ಲಾಕ್ ಡೌನ್, ಸೀಲ್ ಡೌನ್. ಒಟ್ರಾಶಿ ಮಂಡೆ ಬಿಂಗ್ರಿ. ಮೇ ತಿಂಗಳಲ್ಲಿ ಯಾವಾಗ ಬೇರೆ ರಾಜ್ಯದಿಂದ ಬರ್ಲಿಕ್ಕೆ ಅಡ್ಡಿಯಿಲ್ಲ ಹೇಳಿದ್ರೋ ಆಗ ತಮ್ಮ, ಅವನ ಪರಿವಾರದವರೆಲ್ಲ ಒಂದು ಸಣ್ಣ ವ್ಯಾನ್ ಮಾಡಿಕೊಂಡು ಬಂದೇ ಬಿಟ್ಟರು. ಅವ ಬಂದದ್ದೇ ತಡ ಊರಲ್ಲಿ ಗಲಾಟೆ ಸುರುವಾಯಿತು. 'ಬೊಂಬಾಯಿಯಲ್ಲಿ ಇದ್ದವ್ರನ್ನು ಯಾಕೆ ಊರಿನ ಒಳಗೆ ಬರ್ಲಿಕ್ಕೆ ಬಿಟ್ರಿ?' ಅಂತ ಊರಿನವರು ನನ್ನ ಮನೆಯ ಅಂಗಳಕ್ಕೆ ಬಂದು ಲಡಾಯಿ ಮಾಡಿದ್ರು. ನಾನು ಎಂತ ಸಮಾಧಾನದ ಮಾತು ಹೇಳಿದ್ರೂ ಊರಿನವರು ಕೇಳ್ಳಿಲ್ಲ. ಬೊಂಬಾಯಿಯಲ್ಲಿ ಊರು ಒರ್ಬಡಿ ಕೊರೊನಾ ಉಂಟು,ಇನ್ನು ಕುದ್ರೆಬೆಟ್ಟು ಪೂರ ಕೊರೊನಾದಿಂದ ಲಗಾಡಿ ಹೋಗ್ತದೇ ಅಂತ ಗಲಾಟೆಯೊ ಗಲಾಟೆ. ತಮ್ಮ ಕೇಳುವಷ್ಟು ಕೇಳಿದ. ಅವ ಸ್ವಲ್ಪ ರಫ್. 'ನಾನು ಹಿಂದೆಲ್ಲ ದ್ಯಾವಸ್ತಾನಕ್ಕೆ ಬೂತಸ್ತಾನಕ್ಕೆ, ಊರಿನ ತೇರಿಗೆ ಅಂತೆಲ್ಲ ದುಡ್ಡು ಕೊಡುವಾಗ ಯಾವ ನಾಚಿಗೆಯೂ ಇಲ್ಲದೇ ತೆಕ್ಕೊಳ್ತಾ ಇದ್ರಿ? ಈಗ ಕಾನೂನು ಮಾತಾಡ್ತೀರಾ? ನಾನು ಯಾರಿಗೆ ಸಾ ಕ್ಯಾರ್ ಮಾಡುದಿಲ್ಲ. ಇದು ನನ್ನ ಮನೆ. ನನ್ನ ಇಷ್ಟ. ನೀವು ಯಾರಿಗೆ ಹೇಳ್ತೀರಾ ಹೇಳಿ ಹೋಗಿ' ಅಂತ ಜೋರು ಮಾಡಿದ. ಊರಿನವರು ಸಾ ಬಿಡ್ಲಿಲ್ಲ. ಯಾರೋ ಆರೋಗ್ಯ ಇಲಾಖೆಯವರಿಗೆ, ತಹಸೀಲ್ದಾರರ ಆಫೀಸಿಗೆ ಪೋಲೀಸರಿಗೆ ತಿಳಿಸಿದ್ರು. ಮರು ದಿವ್ಸ ಬಂದ್ರು ನೋಡಿ ಆರೋಗ್ಯ ಕಾರ್ಯಕರ್ತರು, ತಾಲೂಕು ಆಫೀಸಿನವರು, ಪೊಲೀಸರು, ಹೀಗೆ ಜನದ ಮೇಲೆ ಜನ. ನಮ್ಮನ್ನು ಯಾರನ್ನು ಸಾ ಹೊರಗೆ ಹೋಗದ ಹಾಗೆ ಮಾಡಿ ಇಟ್ರು. ಬಂದವರ ಕೈಗೆ ಕ್ವಾರಂಟೈನ್ ಸೀಲ್ ಹಾಕಿ ಹೋದ್ರು. ಆಚೆಈಚೆ ಮನೆಯವರ ಹತ್ರ ನಮ್ಮ ಮೇಲೆ ಕಣ್ಣು ಇಡ್ಲಿಕ್ಕೆ ಹೇಳಿದ್ದಿದ್ರು. ಅವ್ರೆಲ್ಲ ನಮ್ಮನ್ನು ಕಳ್ಳರನ್ನು ನೋಡಿದ ಹಾಗೆ ನೋಡ್ಲಿಕ್ಕೆ ಸುರು ಮಾಡಿದ್ರು.

ಮನೆಯಲ್ಲಿ ಒಂದು ವಾರಕ್ಕೆ ಆಗುವಷ್ಟು ಅಕ್ಕಿ ಬೇಳೆ ತರಕಾರಿ ಎಲ್ಲ ಇತ್ತು. ಅದು ಖಾಲಿಯಾದ್ರೆ ಯಾರು ಸಾ ತಂದುಕೊಡುವವರಿಲ್ಲ!. ನೆಂಟರು ಇಷ್ಟರಿಗೆ ಫೋನು ಮಾಡಿದ್ರೆ ನಾವು ನಿಮ್ಮ ಮನೆಯ ಹತ್ರ ಬರೂದಿಲ್ಲ, ಬಂದ್ರೆ ನಮಿಗೆ ಸಾ

